ಮಂಜು ಮನೆ, ಬೆಂಗಳೂರು. 15-04-2000

ರಷ್ಯಾದವರೊಡನೆ ನಡೆದ ಸಂಭಾಷಣೆ

ಅಜ್ಜ – ಇವರು ಬೆಂಗಳೂರಿನಲ್ಲೇ ಇನ್ನು ಇರುತ್ತಾರೋ ಅಥವಾ ಹೋಗುವರ.

ಅನಿಲ್ – ಇಲ್ಲ ಅಜ್ಜ. ನಾಳೆ ಬೊಂಬಾಯಿಗೆ ಹೋಗಿ ಅಲ್ಲಿಂದ ರಷ್ಯಾಗೆ ಹೋಗುತ್ತಾರಂತೆ. ಇರಬೇಕು ಅಂತ ಮನಸ್ಸಿದೆಯಂತೆ. ಆದ್ರೆ ಅವರ ವೀಸಾ ಟೈಂ ಮುಗಿತಾ ಇದೆಯಂತೆ. ಹಾಗಾಗಿ ಹೋಕ್ತಾರಂತೆ.

ರಷ್ಯಾದವ – ಎರಡು ತಿಂಗಳ ಹಿಂದೆ ಬಂದಾಗ ನಿಮ್ಮನ್ನ ನೋಡ್ಲಿಕ್ಕೆ ಆಗ್ಲಿಲ್ಲ.

ಅಜ್ಜ – ಹೇಗೆ ಗೊತ್ತಾಯಿತು ಇದರ ವಿಚಾರ.

ರಷ್ಯಾದವ – ಅಮೇರಿಕಾಗೆ ಹೋದಾಗ ಗೊತ್ತಾಯಿತು. ‘What is Enlightenment’ ಮ್ಯಾಗಜ್ಹೀನ್ ನೋಡಿದೆ.

ಅಜ್ಜ – ಆ್ಯಂಡ್ರು ಕೋಹೇನ್‌ನ್ನಿನ ಸ್ಟೂಡೆಂಟಾ.

ರಷ್ಯಾದವ – ಇಲ್ಲ. ನಾನೇನು ಆ್ಯಂಡ್ರು ಕೋಹೆನ್ನಿನ ಸ್ಟೂಡೆಂಟಲ್ಲ. ಅಲ್ಲಿ ಅವನ ಕೆಲವ ಶಿಷ್ಯರಿದ್ರು. ಅವರು ನನಗೆ ಸ್ನೇಹಿತರಾಗಿದ್ದಾರೆ. ಅವರಿಗೆನೋ . . .

ಅಜ್ಜ – ಇನ್ನೊಬ್ಬರ ವಿಚಾರದಲ್ಲಿ ನಾವು ಕೈ ಹಾಕುವುದು ಬೇಡ ಅಂತ ಹೇಳಿಬಿಡಪ್ಪ ಅನಿಲ.

ರಷ್ಯಾದವ – ನೀವು ಈಗ ಹಾಗೆ ಹೇಳ್ತೀರಾ ಅಂತ ನನಗೆ ಅನ್ನಿಸ್ತಾ ಇತ್ತು. ಹೇಳಿದಿರಿ. (ಎಲ್ಲರ ನಗು)

ಅಜ್ಜ – ಕುಡಿಲಿಕ್ಕೆ ಏನಾದ್ರೂ ಬೇಕಾ, ಕಾಫಿ, ಟೀ.

ರಷ್ಯಾದವ – ಟೀ ಆದೀತು.

*****

ಮಂಜು ಮನೆ, ಬೆಂಗಳೂರು. 16-04-2000

ಕೆಲವರೊಡನೆ ಸಂಭಾಷಣೆ

ಅಜ್ಜ – ನಾವು ಜನ್ಮಕ್ಕೆ ಬಂದದ್ದು, ಇಲ್ಲಿ ಸಂಪಾದನೆ ಮಾಡಿಕೊಂಡೋಗ್ಲಿಕ್ಕಲ್ಲ. ಇದ್ದದ್ದನ್ನು ಕಳಕೊಳ್ಳಿಕ್ಕೆ ನಾವು ಬಂದದ್ದು. ಬಂದದ್ದು ಯಾವ್ದು? ಆ ಜೀವಶಕ್ತಿ ಬಂದದ್ದು. ಅದು ವಿಕಾಸವಾದಾಗ, ಮುಗಿಯಿತು. ಇದನ್ನ ಸ್ವಲ್ಪ ಅರ್ಥ ಮಾಡಿ ಹೇಳ್ಳಿಕ್ಕೆ ನಿಮ್ಮ ಹಾಗಿದ್ದವರು ಬೇಕು (ಒಬ್ಬರನ್ನು ನೋಡಿ) ಸ್ವಲ್ಪ ವಿದ್ವಾಂಸರು ಬೇಕು. ಹ್ಞಂ. ನಾವು ಎಲ್ಲವನ್ನು ಹೇಳುವುದಿಲ್ಲ. ಮೌನದಲ್ಲೇ ವಿಚಾರಗಳನ್ನ ಕೊಡ್ತದೆ. ಹ. ಹ. ಹ. ಮೊದಲು ದೇಹ ಭಾವನೆ ಅಲ್ಲಾ. ಆಮೇಲೆ ಜೀವ ಭಾವನೆ ಬರ್ತದೆ. ಅದೂ ಹೋಗ್ಬೇಕು. ಭಾವನಾತೀತ ಸ್ಥಿತಿ ಬರ್ಬೇಕು. ಆದ್ರೆ ಅಲ್ಲಿಯೇ ‘ನಾನು’ ಉಂಟು. ಅದು ಸಂಕೇತರೂಪಾಗಿ ನಿಲ್ತದೆ. ‘ನಾನು’ ಎಂದರೆ ‘ಅದು’ ಎಂಬುದಾಗಿ ಸೂಚಿಸ್ತದೆ. ‘ನಾನು’ ಅಂದರೆ ದೇಹ ಎಂಬುದನ್ನು ಸೂಚಿಸ್ತದೆ. ಅಲ್ಲ. ನಾನು ಅಂದರೆ ದೇಹ. ಆ ಮನಸ್ಸು ಪರಿವರ್ತನೆಯಾದಾಗ ನಾನು ಅಂದರೆ ದೇಹವಲ್ಲ, ದೇಹದಲ್ಲಿರುವವನು ನಾನು ಅಂತ ಆಗುವಾಗ, ಈ ಮನಸ್ಸು ಅಲ್ಲಿ ಆ ಶಕ್ತಿಯಲ್ಲಿ ಕೇಂದ್ರೀಕೃತವಾಯಿತು. ಆಗ ನಾನು ಅಂದರೆ ಅದು. ಅಲ್ಲಿಗೇ ಮುಗಿಯಲಿಲ್ಲ. ಎರಡನೇ ಹಂತ ಅಲ್ಲಿಂದ ಪ್ರಾರಂಭ ಆಯ್ತು. ಇದು ಭಾಷಣ ಅಥವ ಪ್ರವಚನವಲ್ಲ. ಮೊದಲು ಅಲ್ಲಿಗೆ ಬನ್ನಿ. ಅದಾದ ಮೇಲೆ ಎರಡನೇ ಸ್ಟೆಪ್ಪಿಗೆ ಹೋಗುವ. ಮೊದಲೇ ಹೇಳಿದರೆ, ಭಾಷಣ ಅಥವಾ ಪ್ರವಚನ ಆಕ್ತದೆ.

ಆನಂದಮಯ ಜೀವನಕ್ಕೆ ಹೋಕ್ತದೆ. ಈಗ ಸ್ವಲ್ಪ ಸುಖ–ದುಃಖ ಮಿಶ್ರಿತ ಜೀವನ ಉಂಟಲ್ಲ. ಅಲ್ಲಿ ಆನಂದಮಯ ಜೀವನ ಮಾತ್ರ. ಆನಂದಮಯ ಜೀವನವನ್ನು ಅನುಭವಿಸಿ ಆದ ಮೇಲೆ, ಜೀವನವೇ ಇಲ್ಲ. ಅದು ಪಂಚಕೋಶಗಳನ್ನು ದಾಟಿ ಹೋಯ್ತು. ಅದು ನಮ್ಮ ಸ್ವಭಾವ.

*****

ಬೆಂಗಳೂರು. 15-04-2000

ಪೊಂಜ ಅನ್ನುವವರೊಡನೆ.

ಅಜ್ಜ – ಈ ಮನಸ್ಸನ್ನು ಸ್ವಸ್ಥಾನದಲ್ಲಿ ನಿಲ್ಲಿಸುವಂಥಾದ್ದು, ಒಂದೇ. ಬಾಹ್ಯ ವಿಚಾರದಲ್ಲಿ ಚಲಿಸ್ತಾ ಇರುವಂಥಾ ಮನಸ್ಸನ್ನು ಬುದ್ಧಿಯ ಮೂಲಕ ತನ್ನ ಸ್ವಸ್ಥಾನದಲ್ಲಿ ನಿಲ್ಲಿಸುವಂಥಾದ್ದೊಂದೇ ಸಾಕು. ಬೇರೆ ಏನೂ ಬೇಡ. ಮತ್ತೆ ಅದು ಕರೆಂಟಿಗೆ ಕೈ ಕೊಟ್ಟ ಹಾಗೆ. ಅದು ನೋಡಿಕೊಳ್ತದೆ. ಮೂಲಸ್ಥಾನದಲ್ಲಿರುವ ಜೀವ ಶಕ್ತಿಯಲ್ಲಿ ಈ ಮನಸ್ಸನ್ನು ಕೇಂದ್ರೀಕರಿಸಿದಾಗ ಮನಸ್ಸನ್ನು ಮತ್ತೆ ಅದು ನೋಡಿಕೊಳ್ತದೆ. ಅದೇ ಶರಣಾಗತಿ. ಅಂಥದ್ದು ಅಪರೂಪ.

ಪೊಂಜ – ಸ್ವಾಮಿ ವಿವೇಕಾನಂದ್ರು ಎನ್ಹೇಳ್ತಾ ಇದ್ರೂ ಅಂದ್ರೆ, ನೀನು ಆ ಸ್ಥಿತಿಗೆ ಹೋಗಬೇಕಾದ್ರೆ, ನಿನ್ನ ಇಷ್ಟ ದೇವತೆಯನ್ನು ಮನಸ್ಸಿನೊಳಗೆ ಅಷ್ಟೇ ಸ್ಪಷ್ಟವಾಗಿ ಅದನ್ನ ನೆನೆಸಿ ನೆನೆಸಿ ಅಲ್ಲಿಂದ ಹಿಂದಕ್ಕೆ ಹಿಂದಕ್ಕೆ ಹೋಗು ಅಂತ್ಹೇಳಿ.

ಅಜ್ಜ – ಅದು ಇರಬಹುದು. ಇಲ್ಲ ಅಂತ್ಹೇಳಿ ಇಲ್ಲ. ಒಂದು ಕರ್ಮ, ಒಂದು ಜ್ಞಾನ. ಆ ಕರ್ಮ ವಿಧಾನದಲ್ಲಿ ಅದೆಲ್ಲ ಉಂಟು. ಜ್ಞಾನದಲ್ಲಿ ಅದ್ಯಾವುದೂ ಇಲ್ಲ. ಕರ್ಮದಿಂದ ಪರಿವರ್ತನೆ ಹೊಂದಬೇಕು. ಜ್ಞಾನದಿಂದ ವಿಕಾಸ ಆಯ್ತು.

ಪೊಂಜ – ಅಜ್ಜ, ಕೂತ್ಕೊಂಡಾಗ ನಾನೆಣಿಸೋದು ಅದು ಅಷ್ಟು ಸ್ಪಷ್ಟವಾಗಿ ಕಾಣಿಸಿ, ಅದು ಹಾಗೆ ಹಾಗೆ ಹಾಗೆ ಆಗಿ ಅಲ್ಲಿಂದ ಹಿಂದಕ್ಕೆ ಶೂನ್ಯಕ್ಕೆ ಹೋಗಿಬಿಡುವುದಾ ಅಂತ ಯಾವ್ದ. ಈ ಕಾಂಸಂಟ್ರೇಷನ್ ಒಳಗಿನಿಂದ ಈ ನಮ್ಮ ಸುಪ್ತ ಸ್ಥಿತಿಯಿಂದ ಒಳಗೆ ಹೋಗುವಂಥಾದ್ದು ಒಂದು ವಿಧಾನವನ್ನ . . . ಅಷ್ಟು ಸುಲಭ ಇಲ್ಲ ಅದು. ಆದ್ರೂ.

ಅಜ್ಜ – ಸನ್ನಿವೇಶ ಬಂದು ಕೊಡುವಾಗ ಅದು ತನ್ನಿಂದ ತಾನೇ ಆಕ್ತದೆ. ಸಾಧನೆಯಿಂದ ಇದಾಗೋದಿಲ್ಲ. ಆಗುವಂಥಾದ್ದಲ್ಲ. ಎಲ್ಲ, ಶೋಧನೆ ಅಂತ ಹೇಳ್ತದೆ. ಎರಡನೇ ಹಂತ ಶೋಧನೆ. ಒಂದನೇ ಹಂತ ಕರ್ಮ ವಿಭಾಗ. ಅದರಲ್ಲಿ ಸ್ವಲ್ಪ ಸಾಧನೆ ಇರಬಹುದು. ಸ್ವಲ್ಪ ಪ್ರಯತ್ನ. ಇದರಲ್ಲಿ ಮತ್ತೆ ಅಂದ್ರೆ ಶರಣಾಗತಿಯಲ್ಲಿ ಕೊಂಡು ಹೋಗುವಂಥಾದ್ದು. ಎಲ್ಲ ಅರ್ಪಣೆ ಅವನಿಗೆ.

ಪೊಂಜ – ಕೃಷ್ಣಾರ್ಪಣೆ ಅಂತ್ಹೇಳಿದ ಹಾಗೆ.

ಅಜ್ಜ – ಹಾಂ. ಅದನ್ನ ಆಚರಣೆಗೆ ತರ್ಬೇಕು. ಈ ಧ್ಯಾನಗಳೆಲ್ಲ, ಇದೆಲ್ಲ ಒಂದನೇ ಹಂತಗಳು. ಧ್ಯಾನ ಮಾಡ್ತಾ ಮಾಡ್ತಾ ಧ್ಯಾನ ಮಡಲ್ಪಡುವವನೇ ಆಗುತ್ತಾನೆ. ಅಲ್ಲಿ ಜ್ಞಾನೋದಯ ಆಯ್ತು. ತಾನು ಯಾರು ಎಂಬ ವಿಚಾರದಿಂದ ವಿಕಾಸ ಹೊಂದಿದಾಗ, ತನ್ನ ಅಸ್ತಿತ್ವವನ್ನು ಕಳಕೊಂಡಾಗ ಮತ್ತೆ ಆತ್ಮ ಮಾತ್ರ ಇರುವಂಥಾದ್ದು. ಆತ್ಮ ಮಾತ್ರ.

ಪೊಂಜ – ತತ್ವಮಸಿ.

ಅಜ್ಜ – ಆ್ಞಂ. ಹಾಂ. ಮೊದಲು ದೇಹವೇ ನಾನು ಅಂತ್ಹೇಳಿ ಇತ್ತು. ಎರಡನೇದ್ರಲ್ಲಿ ಸೋಽಹಂ ಭಾವನೆ, ಜೀವ ಭಾವನೆ. ಇದೆರಡೂ ಭಾವನೆ ಹೋದಾಗ ನೋಡಿ ಅಹಂ ಬ್ರಹ್ಮಾಸ್ಮಿ. ಅಲ್ಲಿಯೂ ಸ್ವಲ್ಪ ಉಂಟು. ಆ ಅಹಂ ಹೋಗಬೇಕು. ಆ್ಞಂ. ಆಗಿದ್ದೇನೆ ಅಂತ್ಹೇಳಿ ಅಲ್ಲಿ ಇಲ್ಲ. ಬ್ರಹ್ಮವು ಬ್ರಹ್ಮವೇ ಆಗಿರುವುದು. ನಾನು ಬ್ರಹ್ಮವೇ ಆಗಿದ್ದೇನೆ ಅಂತ್ಹೇಳುವಲ್ಲಿ ಸ್ವಲ್ಪ ಉಂಟು. ಅದು ಹೋದಾಗ ನಿಶ್ಶಬ್ದ. ಪ್ರಪಂಚಕ್ಕಾಗಿ ಜನ್ರಿಗಾಗಿ ಮಾತುಗಳು ಬರುವಂಥಾದ್ದು. ಕರ್ತೃಸ್ಥಾನ ಇಲ್ಲ, ಸಂಕಲ್ಪವಿಲ್ಲ, ಕರ್ಮವಿಲ್ಲ. ಇದು ಜನ್ರಿಗೆ ಆಶ್ಚರ್ಯ ಆಕ್ತದೆ. ಕರ್ತೃತ್ವವಿಲ್ಲದೆ ಮಾತ್ನಾಡುವಂಥಾದ್ದು ಹೇಗೆ ಅಂತ್ಹೇಳಿ. ಹಾಗುಂಟು ಪರಿಸ್ಥಿತಿ. ಆಲೋಚನೆ ಮಾಡೋದಿಲ್ಲ. ಅದರ ಇರುವಿಕೆಯಿಂದ ಸೂಚನೆ ಬರ್ತಾ ಇರುತ್ತೆ ಅಷ್ಟೆ. ಅದು ಹೊರಗಿನವರಿಗಾಗಿ ಇರುವಂಥಾದ್ದು. ತನಗಾಗಿ ಯಾವುದೂ ಇಲ್ಲ. ಇದೆಲ್ಲ ದೇಹದಲ್ಲಿ ಇದ್ದುಕೊಂಡೆ ಆಗುವಂಥಾದ್ದು. ದೇಹವನ್ನು ಬಿಟ್ಟ ಮೇಲೆ ಪುನಃ ಜನ್ಮಕ್ಕೆ ಬರುವಂಥಾದ್ದು ಇದುವೇ ಕೆಲಸವಾಯ್ತು. ಹಾಗಾಗಿ ದೇಹದಲ್ಲಿರುವಾಗ್ಲೆ ಅವನು ಅವನ ಜನ್ಮವನ್ನು ಇತ್ಯರ್ಥಗೊಳಿಸುವಂಥಾದ್ದು. ಜನ್ಮವನ್ನು

ಸಾರ್ಥಕಮಾಡಿಕೊಳ್ಳುವಂಥಾದ್ದು ಅಷ್ಟೆ. ಬೇರೆ ಏನೂ ಇಲ್ಲ. ಪ್ರಚಾರ, ಕೀರ್ತಿ, ಅದು, ಇದು ಯಾವುದೂ ಇಲ್ಲ. ಜನ್ಮಕ್ಕೆ ಬಂದದ್ದಕ್ಕೆ ಸಾರ್ಥಕ ಆಯ್ತು. ಎಲ್ಲಾ ಆಸೆಗಳಿಂದ ನಿವೃತ್ತನಾದಾಗ ಪುನಃ ಜನ್ಮಕ್ಕೆ ಬರ್ಲಿಕ್ಕೆ ಆಸೆಯೇ ಇಲ್ಲ. ಆಸೆ ಇದ್ರೆ ಜನ್ಮಕ್ಕೆ ಬರ್ತಾನೆ. ಎಲ್ಲಾ ಇಲ್ಲೆ ನಿವೃತ್ತಿ ಮಾಡಿಕೊಂಡಾಗ ಆಯ್ತು. ಈ ದೇಹಕ್ಕೆ ಸಂಬಂಧ ಪಟ್ಟ ಆಸ್ತಿ, ಬದುಕು, ಹಣ ಸಂಸಾರ ಇವೆಲ್ಲವನ್ನು ಇಲ್ಲಿಯೇ ಬಿಟ್ಟು, ಆ ಜೀವಾತ್ಮ ಹೊರಟು ಹೋಕ್ತಾನೆ. ಇದೆಲ್ಲ ಇಲ್ಲಿಗೆ ಈ ವಾತಾವರಣಕ್ಕೆ ಪ್ರಯೋಜನ ಉಂಟು. ಈ ದೇಹವನ್ನು ಬಿಟ್ಟ ಮೇಲೆ ಇದ್ಯಾವುದೂ ಅಂದ್ರೆ ಈ ಆಸ್ತಿ, ಹಣ, . . ಇದ್ಯಾವುದೂ ಪ್ರಯೋಜನಕ್ಕೆ ಬರೋದಿಲ್ಲ. ಪುನಃ ಬಂದ, ಪುನಃ ಅದೇ ಅನುಸರಿಸಿ, ಅನುಸರಿಸಿ, ಬರೀ ಇದೇ ಕೆಲ್ಸ ಆಯ್ತು. ಅಂತಿಮಕ್ಕೆ ಯಾವ್ದೂ ಸಿಕ್ಕೋದಿಲ್ಲ. ಇಲ್ಲಿ ಎಲ್ಲವು ಬೇಕು ದೇಹಕ್ಕಾಗಿ. ಆ ದೇಹ ಯಾಕೆ. ಅವ ಇರ್ಲಿಕ್ಕಾಗಿ. ಅವನು ದೇಹದಲ್ಲಿದ್ದುಕೊಂಡು ದೇಹಾತೀತನಾಗಿ ಇರುವಂಥಾದ್ದೆ ಪ್ರಾಧಾನ್ಯ. ಈಗ ಈ ಮನೆಯಲ್ಲಿ ನಾವುಂಟು. ಈ ಮನೆ ನಮ್ಮದಾ. ಹಾಗಾದ್ರೆ ಇರಬಾರ್ದ? ಇರಬಹುದು. ಹಾಗೆ ದೇಹದಲ್ಲಿದ್ದ ಮಾತ್ರಕ್ಕೆ ದೇಹ ತಾನಾಗೋದಿಲ್ಲ. ದೇಹದಲ್ಲಿರುವವನು ತಾನು ಎಂಬ ಅನುಭವ ಬರ್ಬೇಕಾದ್ರೆ ನೋಡಿ, ಕರ್ಮದಿಂದ ಪರಿವರ್ತನೆ ಹೊಂದಿದ ಜೀವಾತ್ಮರುಗಳಿಗೆ ಬರ್ತದೆ. ಇದು ಬರ್ಲಿಕ್ಕೆ ಸಾಧ್ಯ. ನಾಮಸ್ಮರಣೆ ಮತ್ತು ಶರಣಾಗತಿಯಿಂದ ಇದು ಬರ್ತದೆ. ತಾನು ಅನುಭವಿಸಿ ಆದಾಗುವಂಥಾದ್ದು, ಆಮೇಲೆ ಹೇಳುವಂಥಾದ್ದು. ಇಲ್ಲವಾದ್ರೆ ಅವನಿಗೆ ಹೇಳುವ ರೈಟ್ ಅವ್ನಿಗಿಲ್ಲ. ತಾನು ಸ್ವತಂತ್ರನಾಗುವಂಥಾದ್ದು. ಸ್ವತಂತ್ರರಾಗುವವರಿಗೆ ಅಂಥಾ ದಾರಿ ಹೆಳುವಂಥಾದ್ದು. ಪ್ರತಿಯೊಂದು ಕೃತಿಯಲ್ಲಿ ಬರ್ಬೇಕಲ್ಲ. ಕೃತಿಯಲ್ಲಿ ಬಾರದೇ ಇದ್ರೆ, ಪುಸ್ತಕದ ಓದುವಿಕೆಯೇ ಆಯ್ತು. ಅನುಕರಣೆಯಾಯಿತು. ಅನುಕರಣೆಯಿಂದ ಏನೂ ಆಗೋದಿಲ್ಲ. ಮೊದ್ಲು ತಾನಾಗಲೇ ಬೇಕು. ಆದಾಗ ಅದು ತನಗಾಗಿ ನಿಲ್ಲೋದಿಲ್ಲ. ಅದು ಇನ್ನೊಬ್ಬನಿಗಾಗಿ ಮತ್ತೆ ಹೊರಗೆ ಬೀಳ್ತದೆ.

ವಿಜ್ಞಾನವು ಹೊರಗಿನ ಲೋಕವನ್ನು ಅರಿತದೆ. ಬಾಹ್ಯಾಕಾಶದ್ದೆಲ್ಲ, ಅದೆಲ್ಲ ಕೇಳೋದೇ ಬೇಡ ಅಷ್ಟು ಇದೆ. ಆದ್ರೆ ಇದು ಆ ವಿಜ್ಞಾನಿಗಳಿಗೆ ಸಿಕ್ಕೋದಿಲ್ಲ. ಅದೇ ಮನಸ್ಸು ಅಂತರ್ಮುಖವಾದಾಗ ಇದನ್ನು ಕಂಡುಹಿಡಿಲಿಕ್ಕೆ ಸಾಧ್ಯ ಉಂಟು. ವಿಜ್ಞಾನಕ್ಕೂ ಇದಕ್ಕೂ ಅಷ್ಟೇ ಹೆಚ್ಚು ಕಮ್ಮಿ. ಜ್ಞಾನಕ್ಕೂ ವಿಜ್ಞಾನಕ್ಕೂ ಸ್ವಲ್ಪ ಹೆಚ್ಚು ಕಮ್ಮಿ. ಅವರು ಬಾಹ್ಯವಿಚಾರದಲ್ಲಿ ಸಂಶೋಧನೆ ಮಾಡ್ತಾರೆ. ಇವನು ಅಂತರ್ವಿಚಾರವನ್ನು ಶೋಧನೆ ಮಾಡ್ತಾನೆ. ಆ ಶೋಧನೆ ಮಾಡುವವನು ತನ್ನ ಅಸ್ತಿತ್ವವನ್ನು ಕಳಕೊಂಡಾಗ, ಮತ್ತೆ ಸಹಜಾವಸ್ಥೆ.

ಪೊಂಜ – ಅದೇ ಸೂಪರ್ ಕಾನ್ಶಿಯಸ್‌ನೆಸ್ ಅಂತ ಹೇಳ್ತಾರೆ.

ಅಜ್ಜ – ಅಂದ್ರೆ.

ಪೊಂಜ – ಪೂರ್ಣ ಜ್ಞಾನ.

ಅಜ್ಜ – ಅದು ಈ ಸುಪ್ತ ಪ್ರಜ್ಞೆಗೆ ಅರಿವಾಕ್ತದೆ. ಅದು ಅಂದ್ರೆ ಆತ್ಮ. ಈ ಅರಿವಿನಿಂದ ಆಚೆಗಿನವನು ಅದನ್ನ ಈ ಮಾತು, ಶಬ್ದಗಳಿಂದ ವರ್ಣನೆ ಮಾಡ್ಲಿಕ್ಕೆ ಆಗೋದಿಲ್ಲ.

ಪೊಂಜ – ಅದೇ ಹೇಳ್ತಾರೆ, ನಾವು ಎಷ್ಟು ವರ್ಣನೆ ಮಾಡಿದ್ರೂ ಅದು ಈ ಗಾಜಿನ ವರ್ಣನೆ ಮಾಡಿದ್ಹಾಗೆ ಅಂತ.

ಅಜ್ಜ – ಅಷ್ಟೆ. ಅದು ಈ ಮನ್ಸಿಗೆ ಉಹೂಂ. ಸಂಪೂರ್ಣ ಮನ್ಸು ಅದ್ರಲ್ಲಿ ತಲ್ಲೀನನಾಗಬೇಕು. ಬಾಹ್ಯದ ಯಾವುದೇ ಒಂದು ಆಸೆ ಇದ್ರೂ ಮನಸ್ಸು ಕೇಂದ್ರೀಕೃತ ಆಗೋದಿಲ್ಲ. ಮನಸ್ಸು ಕೇಂದ್ರೀಕೃತ ಆದ ಮೇಲೆ ಧ್ಯಾನ. ಮತ್ತೆ ಅಷ್ಟರವರೆಗೆ ಸಾಧ್ಯ ಇಲ್ಲ.

ಪೊಂಜ – ಅಷ್ಟರವರೆಗೆ ಅವ ಏನೂ ಧ್ಯಾನ ಮಾಡೋದಿಲ್ಲ.

ಅಜ್ಜ – ಅವ ಅಭ್ಯಾಸ ಮಾಡ್ತಾ ಇದ್ದಾನೆ ಅಂತ ಹೇಳ್ಬಹುದು.

ಪೊಂಜ – ಅಷ್ಟೇ, ಅಷ್ಟೇ. ಪ್ರಯತ್ನ ಮಾತ್ರ.

ಅಜ್ಜ – ಹಾಂ. ಪ್ರಯತ್ನ ಮಾತ್ರ ಮಾಡ್ತಾನೆ ಅಷ್ಟೇ. ಆ ಪ್ರಯತ್ನ ಫಲಕಾರಿಯಾಗ್ಬೇಕಾದ್ರೆ ಮನಸ್ಸು ಸಂಪೂರ್ಣ . . ಎಚ್ಚರದಲ್ಲಿ ನಿದ್ರಾ ಸ್ಥಿತಿ ಬರಬೇಕು. ಅಷ್ಟೆ.

ಪೊಂಜ – ಸಾವಿರಾರು ಆಸೆ, ಆಲೋಚನೆಗಳು ಮನುಷ್ಯನನ್ನ ಕಾಡ್ತವೆ.

ಅಜ್ಜ – ಅದಾಗೋದಿಲ್ಲ. ಅದು ಕಮ್ಮಿ, ಕಮ್ಮಿ, ಕಮ್ಮಿ ಆಗ್ಬೇಕು. ಅದೊಂದೇ ಧ್ಯಾನದಲ್ಲಿದ್ದಾಗ, . . . ಅದಕ್ಕೆ ಹಿಂದಿನ ಸಂಸ್ಕಾರವೂ ಬೇಕು. ಹಿಂದಿನ ಸಂಸ್ಕಾರ ಅಂತ್ಹೇಳಿ ಸುಮ್ನೆ ಕೂತ್ರೆ ಆಗೋದಿಲ್ಲ. ಈಗಿನ ಸಂಸ್ಕಾರವು ಮುಂದಿನದಕ್ಕೆ ಎಡೆ ಕೊಡ್ತದೆ.

ಪೊಂಜ – ಅಜ್ಜ ಈಗ ಅಂದ್ರೆ ಇವತ್ತಿನ ಒಂದು ಪರಿಸ್ಥಿತಿಯಲ್ಲಿ ಅವನು ಒಬ್ಬ ಗುರುವಿನಿಂದ ಪ್ರೇರಿತನಾಗ್ಬೇಕು ಅಂತ್ಹೇಳಿ.

ಅಜ್ಜ – ಅಂದ್ರೆ.

ಪೊಂಜ – ಅಂದ್ರೆ ಈ ರಾಮಕೃಷ್ಣ ಪರಮಹಂಸರಿಂದ ವಿವೇಕಾನಂದ್ರಿಗೆ ಒಂದು ಪ್ರೇರಣೆ ಸಿಕ್ಕಿತು. ಹಾಗೆ ಅವನದೇ ಯೋಗ್ಯತೆಯಿಂದ ಮಾಡ್ಲಿಕ್ಕೆ ಜೀವನ ಅವ್ನಿಗೆ ಸಾಕಾಕ್ತದ ಹಾಗೆ . . .

ಅಜ್ಜ – ಆದ್ರೆ ಅವನು ತಯಾರಾದಾಗ ಗುರು ಒದಗಿ ಬರ್ತಾನೆ. ಬೇಕಾದ್ದಕ್ಕೆ ತಯಾರಾಗಿ ಈಗ. ರಾಮಕೃಷ್ಣರಲ್ಲಿ ಅದಿತ್ತು. ಅದನ್ನ ಅವನು (ವಿವೇಕಾನಂದ) ಪಡಕೊಂಡ. ಇವ ಕೊಟ್ಟದ್ದು ಅಂತ್ಹೇಳಿ ಆಗಿದ್ರೆ ಎಲ್ರಿಗೂ ಕೊಡ್ಬೇಕಿತ್ತು. ಕೊಡೋದಿಲ್ಲ. ಅವನು ಅರ್ಹತೆ ಇದ್ದಿದ್ರಿಂದ . . . ನೋಡಿ ಹಾಗುಂಟು. ಅರ್ಹತೆ ಮುಖ್ಯ. ಅರ್ಹತೆ ಇದ್ದಾಗ ಅಲ್ಲಿಗೆ ಬಂತದು. ಇವ ಕೊಟ್ಟ ಅಂತ್ಹೇಳಿ ಹೇಳ್ತಾರೆ. ಇವನಿಗೆ ತಾನು ಕೊಟ್ಟದ್ದು ಅಂತ್ಹೇಳಿ ಗ್ರಹಿಕೆ ಇಲ್ಲ. ಅವ ಪಡಕೊಂಡ. ಹ. ಹ. ಹ. ಓಂ.

ಪೊಂಜ – ಈಗ ಒಬ್ಬ ಡಾಕ್ಟ್ರೇಟ್ ಕಲ್ತ ಮೇಲೆ ಅವನಿಗೆ ಡಿಗ್ರಿ ಕೊಟ್ಟಹಾಗೆ.

ಅಜ್ಜ – ಹಾಂ. ಆದ್ರಿಂದ ಹುಡುಕುವವರೂ ಇದ್ದಾರೆ. ಹುಡುಕುವವರಿಗೆ ಕೊಡುವವರೂ ಇದ್ದಾರೆ. ಅದು ಲೋಕಾರೂಢಿ, ಅಲ್ವಾ. ಮೂಲತಃ ಒಬ್ಬನೆ ಕೊಡುವವನು, ಕೊಡಲ್ಪಡುವವನು ಎಲ್ಲಾ ಒಬ್ಬನೆ. ಆನಂದಮಯ ಜೀವನ.

*****

ಮಂಜು ಮನೆ, ಬೆಂಗಳೂರು. 18-04-2000

ಕೆಲವರೊಡನೆ ನಡೆದ ಸಂಭಾಷಣೆ

ಅಜ್ಜ – ಸುಪ್ತ ಪ್ರಜ್ಞೆ ಜಾಗೃತವಾದಾಗ ಅರಿವಾಗುವಂಥಾದ್ದು. ಇದೆಲ್ಲ ಪ್ರಕೃತಿಗೆ ಸಂಬಂಧಪಟ್ಟದ್ದು. ಪ್ರಕೃತಿಯಿಂದ ಆಚೆಗೆ ಅದು (ಆತ್ಮ) ಇರುವಂಥಾದ್ದು. ಅದರ ಇರುವಿಕೆಯಿಂದ ಇದೆಲ್ಲವೂ ಕಾಣಿಸುವಂಥಾದ್ದು. ಉಂಟಾಯಿತು. ಇರುತ್ತದೆ. ಇಲ್ಲದೆ ಆಗುತ್ತದೆ. ಮುಗೀತು ಅಷ್ಟೆ. ಇದೆಲ್ಲವು 'ದೇಹದಲ್ಲಿ ಜೀವಾತಮನು ಇರುವಾಗ್ಲೆ' ಕಂಡುಕೊಳ್ಳುವಂಥಾದ್ದು. ಓಂ. ಅನುಕರಣೆಯಲ್ಲ. ಅನುಕರಣೆಯಾಗಬಾರದು. ಅನುಕರಣೆ ತನ್ನ ಪ್ರಯೋಜನಕ್ಕೆ ಯಾವತ್ತೂ ಬರೋದಿಲ್ಲ. ಬರಬಹುದು ಸ್ವಲ್ಪ ಮಟ್ಟಿಗೆ. ಆದ್ರೆ ಸ್ವತಃ ಅನುಭವಿಸಿಯೇ ಆಗುವಂಥಾದ್ದು. ಅದು ಎಲ್ಲರಿಗೂ ಸಾಧ್ಯ. ಅದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆಗಳೂ ಇಲ್ಲಿ ಉಂಟು. ಅಲ್ಲಿಯೂ ಉಂಟು. ಇಲ್ಲಿ ಅಂದ್ರೆ ಪ್ರತಿಯೊಂದು ದೇಹದಲ್ಲಿ ಉಂಟು. ದೇಹಕ್ಕು ಪ್ರಪಂಚಕ್ಕು ಸಂಬಂಧ ಅಲ್ಲ. ಓಂ. ಪ್ರಪಂಚದಿಂದ್ಲೇ ಇದು ಉಂಟಾದದ್ದು ಅಲ್ಲಾ ಅರ್ಥಾಯ್ತ. ಅರ್ಥ ಮಾಡ್ಕೊಳ್ಬೇಕು. ಒಳಗೊಬ್ಬ ಇದ್ದಾನೆ. ಅಂದ್ರೆ ಒಂದು ಜೀವ ಶಕ್ತಿ ಉಂಟು. ಅದು ಮೂಲ ಪ್ರಕೃತಿ ಇರುತ್ತದೆ. ಇಲ್ಲದೆ ಆಗುತ್ತದೆ. ಆ ಪ್ರಕೃತಿಯನ್ನೆ ಸತ್ಯ ಅಂತ್ಹೇಳಿ ಈ ಮನಸ್ಸು ನಂಬಿದೆ. ಮನಸ್ಸು ಎಂಬುದೇ ಅಸತ್ಯ. ಇದು ಅಸತ್ಯವಾದ ಪ್ರಕೃತಿಯನ್ನು ನಂಬಿ ಮೋಸ ಹೋಕ್ತದೆ. ಆದ್ರೆ ಪ್ರಪಂಚ ನಡೀಲಿಕ್ಕೆ ಇದು ಹೀಗೆ. ಮೋಸ ಹೋಗೋದಲ್ಲ. ಪ್ರಕೃತಿ ನಿಯಮ. ನಾವು ಈ ಪ್ರಕೃತಿಯಿಂದ ಆಚೆಗೆ ಹೋಗ್ಬೇಕು. ಹೋಗೋದಿಲ್ಲ. ಅಲ್ಲಿ ಏನಾಗ್ಬಿಡ್ತದೋ ಅಂತ ಭಯ ಬರ್ತದೆ ಅಲ್ವಾ. ಪ್ರತಿಯೊಬ್ಬರೂ ಇದೊಂದು ಮಾದರೀ ರೂಪ

ಅಷ್ಟೆ. ತನ್ನ ಅಸ್ತಿತ್ವವನ್ನು ಕಳಕೊಂಡಿತು ಆ ಪ್ರಕೃತಿ. ಅದು (ಆತ್ಮ) ಯಾವಾಗಲೂ ಇರುವಂಥಾದ್ದು. ಆದ್ರಿಂದ ಅದಕ್ಕೆ 'ಅದು' ಎಂಬ ಸಂಬೋಧನೆ. ಮನಸ್ಸು ಬುದ್ಧಿಗೆ ಅದು ಎಟುಕೋದಿಲ್ಲ. ಆದ್ರೆ ಸುಪ್ತ ಪ್ರಜ್ಞೆಗೆ ಅದು ಹೊಳೀತದೆ. ಅಲ್ಲಿ ಆಲೋಚನೆಯೇ ಇಲ್ಲ. ಆಲೋಚನೆ ಮಾಡುವ ಪ್ರಶ್ನೆಯೇ ಇಲ್ಲ. ಇದ್ದದ್ದು ಇದ್ದ ಹಾಗೆ ಹೇಳ್ಳಿಕ್ಕೆ ಆಲೋಚನೆ ಬೇಕಾ. ಬೇಕಾ? ಅ್ಞಂ. ಕ್ರಿಕೆಟ್ ಆಟ ಆಡ್ತಾ ಇರ್ತಾರೆ. ಒಬ್ಬನು ಅಲ್ಲಿ ಕೂತು ಇದ್ಮಾಡ್ತಾ ಇರ್ತಾನೆ. ಅಂದ್ರೆ ಏನ್ಮಾಡ್ತನೆ ಮೇಲ್ ನಿಂತ್ಕೊಂಡು.

ಒಬ್ಬರು – ಕಾಮೆಂಟ್ರಿ.

ಅಜ್ಜ – ಹಾಂ. ಅವ ಏನ್ ಮಾಡ್ತಾನೆ.

ಒಬ್ಬರು – ವಿವರಣೆ ಕೊಡ್ತಾನೆ.

ಅಜ್ಜ – ಹಾಂ. ವಿವರಣೆ ಕೊಡ್ತಾನೆ. ಅವ ಆಲೋಚನೆ ಮಾಡೋದಿಲ್ಲ. ಇವ ಹೇಳುವುದು ಅಲ್ಲಿ ಬಾಲ್ ಬೀಳುವುದು ಎರಡೂ . . . ಅರ್ಥ ಮಾಡಿಕೊಳ್ಳಿ ಹೇಗೆ ಅಂತ್ಹೇಳಿ. ಇವ ಹೇಳುವಾಗ ಅಲ್ಲಿ ಬಿದ್ದಾಯ್ತು. ಅಲ್ಲಿ ಬಿದ್ದಾಗುವಾಗ ಇವ ಹೇಳುವಂಥಾದ್ದು. ಅವ ಆಲೋಚನೆ ಮಾಡಿ ಹೇಳುವಂಥಾದ್ದಲ್ಲ. ಅಷ್ಟು ಅವನಿಗೆ ಸರ್ವೀಸ್ ಇರ್ತದೆ ಅಲ್ಲಾ. ಅವ ಹೇಳುವವ ಹ್ಯಾಗಿರ್ಬೇಕು. ಅವನ ದೇಹದ ಪರಿವೇ ಅವನಿಗಿಲ್ಲ ಆವಾಗ. ಪರಿವೆ ಇದ್ರೆ ಹೇಳ್ಳಿಕ್ಕಾಗೋದಿಲ್ಲ ಅಲ್ಲ. ಅದು ಆ ಚೆಂಡು ಹ್ಯಾಗೆ ಹೋಯ್ತು, ಹ್ಯಾಗೆ ಬಂತು ನೋಡಿ. ಅಲ್ಲೇ ಅದನ್ನು ನೋಡಿಕೊಂಡು ಹೇಳ್ತಾ ಇರೋದು. ಅದೇ ರೀತಿ ಮನಸ್ಸು ಏನಾಗ್ಬೇಕು . . . ಆ ಮೂಲ ಶಕ್ತಿಯಲ್ಲಿ ಕೇಂದ್ರೀಕೃತವಾದಾಗ . . . ನಾನೂ ಅಂದ್ರೆ ಅದುವೆ. ದೇಹದಲ್ಲಿರುವವನು ನಾನು. ನಾನು ಅಂದ್ರೆ ಅದು. ಅದರ ಅಸ್ತಿತ್ವ ಹೋದಾಗ . . . ಹಾಗಿರುವುದರ ಅಸ್ತಿತ್ವ ಹೋಗ್ಬೇಕು. ಆಮೇಲೆ ಯಾವ್ದುಂಟು. ಅದು ಅದುವೇ . . . ಅ್ಞಂ.

ಇಲ್ಲಿಯ ಪ್ರಪಂಚಕ್ಕೆ ಬೇಕಾಗಿ ಆ ಮನಸ್ಸನ್ನು ಸ್ವಲ್ಪ ಇಲ್ಲಿ ಇಟ್ಟುಕೊಂಡಿದೆ. ಇದು ಹೇಳ್ಳಿಕ್ಕೆ ಬೇಕಾಗಿ ಇಟ್ಟುಕೊಂಡದ್ದೊ ಏನೋ. ಇಲ್ಲವಾದ್ರೆ ಎನೂ ಕೆಲ್ಸ ಇಲ್ಲ. ಜಗತ್ತಿಗಾಗಿ ವಿಶ್ವಕ್ಕಾಗಿ ಇದು (ಮಾತುಗಳು) ಇರುವಂಥಾದ್ದು. ನಮ್ಮ ಜೀವನವೇ ಸಂದೇಶ ಅಂತ ಹೇಳುವಂಥಾದ್ದು. ಅನುಕರಣೆ ಸಿದ್ಧಾಂತಗಳೇನೂ ಇಲ್ಲ. ಈ ಜೀವನ ಸಂದೇಶಗಳನ್ನು ಅಂದರೆ. ಇದನ್ನೇ ಅನುಕರಣೆ ಮಾಡಿ ಹೇಳುವವರೂ ಇದ್ದಾರೆ. ಇಲ್ಲಾ ಅಂತ ಹೇಳೋದಿಲ್ಲ. ಇದು ಅನುಕರಣೆ ಆಗ್ಬಾರದು. ಜೀವನದಲ್ಲಿ ಕೃತಿಯಲ್ಲಿ ಅಳವಡಿಸಿಕೊಳ್ಳೊದಕ್ಕೆ ಬೇಕಾಗಿ ಇರುವಂಥಾದ್ದು. ಹಾಂ. ನಿಮ್ಮ ಟೈಂ ಆಯ್ತು.

*****

ಮಂಜು ಮನೆ, ಬೆಂಗಳೂರು. 20-04-2000

ಕೆಲವರೊಡನೆ ನಡೆದ ಸಂಭಾಷಣೆ

ಅಜ್ಜ – ಸಾಧನೆಯಲ್ಲಿ ಇಂಥಾದ್ದು ಆಗಬೇಕು ಎಂಬ ಸ್ವಾರ್ಥ ಉಂಟು ಅಲ್ವಾ. ಅ್ಞಂ. ನನಗೆ ಮುಕ್ತಿ ಸಿಕ್ಕಬೇಕು. ಶಾಂತಿ ಸಿಕ್ಬೇಕು. ಇನ್ನು ಏನಪ್ಪ, ಒಳ್ಳೇದಾಗ್ಬೇಕು ನಮ್ಗೆ ಅ್ಞಂ. ಎಲ್ಲ ಉಂಟು. ಇದೆಲ್ಲ ಮನಸ್ಸಿನ ಆರ್ಭಟಗಳು. ಮನೋ ನಾಶವಾದಾಗ ಅಲ್ಲಿ ಮತ್ತೆ ಸ್ವಾರ್ಥ ಕಾಣೋದಿಲ್ಲ. ಆಲೋಚನೆ ಮಾಡುವಂಥ ವಿಷಯವೇ ಇಲ್ಲ. ಜನ್ಮಕ್ಕೆ ಬರುವವನಿಗೆ ಸಾವು ಸಂಭವಿಸಿದಾಗ ಮಾತ್ರ ಆತ್ಮ ವಿಚಾರ ಅಲ್ಲಿ ಇದು ದೇಹದಲ್ಲಿರುವಾಗ್ಲೇ ಆಗುವಂಥಾದ್ದು. ನೀವೆಲ್ಲ ಓದಿದ್ರಲ್ಲಿರ್ಬೋದು. ಇಂಥಾದ್ದೆಲ್ಲ ವಿಚಾರಗಳು ಅಲ್ವಾ. ದೇಹದಿಂದ ಜೀವ ಶಕ್ತಿ ಬಿಟ್ಟು ಹೋಯ್ತು ಸಾವು ಸಂಭವಿಸಿತು ಅಂತ್ಹೇಳಿ. ಏನೆಲ್ಲ ಏನೆಲ್ಲ ಮಾಡ್ತಾರೆ ಇವ್ರು. ಅದ್ರವಸ್ಥೆ ಹೇಳಿ ತೀರದು. ಅವ ಸತ್ತು ಹೋದಾಂತೆ. ಎಂಥದು ಸಾಯೋದು. ಅವ ಸತ್ತು ಹೋದ ಅಂತ್ಹೇಳಿದ್ರೆ ಪುನರ್ಜನ್ಮಕ್ಕೆ ಆಧಾರವೇ ಇಲ್ಲ. ಪುನರ್ಜನ್ಮವನ್ನು ಅವರು ನಂಬ್ಲಿಕ್ಕೇ ಕೂಡ್ದು. ಪುನರ್ಜನ್ಮವನ್ನು ಯಾವಾತನು ನಂಬುತ್ತಾನೋ ಅವನು ಈ ಸಾವಿಗೆ ಮಹತ್ವ ಕೊಡುವ ಅಗತ್ಯವೇ ಇಲ್ಲ. ಇದು ಈ ಜೀವಶಕ್ತಿ ಹೊರಟು ಹೋಯಿತು. ಇದು ಜೀವಂತವಾಗಿ ಇದ್ದ ಕಾರಣ ಹೊರಟು ಹೋಯಿತು. ಅದು ಪುನಃ ಬಂತು, ಪುನಃ ಬಂತು. ಇಲ್ಲಿ ಅದಕ್ಕೆ ಸಾವು ಸಂಭವಿಸುವ ಒಂದು ಕ್ರಮ ಉಂಟು. ದೇಹದಲ್ಲಿರುವಾಗ್ಲೇ ಅದಕ್ಕೆ ಸಾವು ಸಂಭವಿಸಿದಾಗ ಆತ್ಮ ವಿಚಾರ. ಅಂದ್ರೆ, ಕಾರಣ ದೇಹವು ತನ್ನ ಅಸ್ತಿತ್ವವನ್ನು ಕಳಕೊಂಡಾಗ . . . ಆ ಕಾರಣ ದೇಹದ ಒಳಗೆ ಸತ್ಯ ಉಂಟು. ಕಾರಣ ದೇಹವು ಸ್ಫೋಟವಾದಾಗ ಸತ್ಯದ ಅರಿವು ಅಲ್ಲಿ. ಅಲ್ಲಿ ಸತ್ಯವನ್ನು

ಅರಿಯುವವನಿಗೇ ಸಾವು ಬಂತು. ಸತ್ಯವನ್ನು ಅರಿಯುವವನಿಲ್ಲ. ಸತ್ಯ ಮಾತ್ರ ಇರುವಂಥಾದ್ದು. ಅದು ಮಾತಿಗೆ. ಅದಕ್ಕೆ ಇದಕ್ಕೆ ಯಾವುದಕ್ಕೂ ಸಿಕ್ಕೋದಿಲ್ಲ. ಅದು ಅದುವೇ ಆಯಿತು. ಹ. ಹ. ಹ. ಅದನ್ನ ಇನ್ನೊಬ್ಬನು ಅದು, ಇದು ಅಂತ ಹೇಳ್ಬವುದು. ಅವನ ಮಟ್ಟಿಗೆ ಏನೂ ಇಲ್ಲ. ಅದು ವರ್ಣನಾತೀತ ಹೇಳ್ಳಿಕ್ಕೆ ಸಾಧ್ಯವಿಲ್ಲ. ವರ್ಣನಾತೀತ. ಸ್ಥಿತಿಯಲ್ಲದ ಸ್ಥಿತಿ. ಸ್ಥಿತಿ ಇದ್ರೆ ಅದಕ್ಕೆ ನಾಶ ಉಂಟು. ಇದು ಸ್ಥಿತಿಯೇ ಅಲ್ಲದಿದ್ದ ಮೇಲೆ ಅದಕ್ಕೆ ನಾಶ ಉಂಟ.

'ನಾನು', 'ನಾನು' ಅಂತ ಹೇಳ್ತನಲ್ಲ. ಆ 'ನಾನು' ಯಾರು? ಅ್ಞಂ. ಆ 'ನಾನು' ತನ್ನ ಅಸ್ತಿತ್ವವನ್ನು ಕಳಕೊಂಡಾಗ ಅಲ್ಲಿ ಯಾರೂ ಇಲ್ಲ. ಇಲ್ಲಿ ಪ್ರತಿಯೊಂದು ದೇಹದಲ್ಲಿ ಇರುವಂಥಾದ್ದು. ಪ್ರತಿಯೊಂದು ಜೀವಿಯಲ್ಲೂ ಇದುಂಟು. ಹಾಗಾಗಿ ಈಗ ನಾವು ಕಾಣುವಂಥಾ ಸತ್ಯವು, ಅದು ಅಸತ್ಯವೆಂದು ಅರಿವಾದಾಗ ಸತ್ಯದ ಅರಿವು. ಅಷ್ಟುವರೆಗೆ ಆಗೋದಿಲ್ಲ. ಏಕೆ? ಇದೇ ಸತ್ಯ ಅಂತ್ಹೇಳಿ ಉಂಟಲ್ಲ. ಬೇರೆ ಅವನಿಗೆ ಹುಡುಕ್ಲಿಕ್ಕೆ ಎಡೆಯೇ ಇಲ್ಲ. ಇದು ಅಸತ್ಯ ಅಂತ್ಹೇಳಿ ಅವನಿಗೆ ಕಂಡರೆ ಮುಗೀತು. ಅದನ್ನ ಇನ್ನೊಬ್ಬನು ಹೇಳಿದ್ರೆ ಆಗೋದಿಲ್ಲ. ಅಲ್ವಾ. ಅವ್ನಿಗೆ ಕಂಡಾಗ ಮುಗೀತು. ಆ ಸತ್ಯ ಶೋಧಕನು ಸತ್ಯವೇ ಆಗುತ್ತಾನೆ. ಅಂದ್ರೆ ಆತ್ಮ ಶೋಧಕನು ಆತ್ಮವೇ ಆಗುತ್ತಾನೆ. ಮುಗೀತು. ಎಲ್ಲ ಒಳಗೇ ಆಗುವ ಕೆಲಸಗಳು.

ಆಲೋಚನೆ, ವಿದ್ಯಾವಂತಿಕೆ, ಬುದ್ಧಿವಂತಿಕೆ ಎಲ್ಲಾ ಬೇಕು. ಯಾಕೆ? ಉಪನ್ಯಾಸಕ್ಕೆ, ಮತ್ತೆ ಪ್ರವಚನಕ್ಕೆ. ಛೆ, ಛೆ, ಛೆ, ಛೆ. ಏನು ಮೈಕಿಟ್ಟುಕೊಂಡು ಅವ ಸ್ಪೀಚ್ ಕೊಡ್ತಾನೆ. ಇದು ಬುದ್ಧಿವಂತಿಕೆ ಆಯ್ತು. ಬುದ್ಧಿವಂತಿಕೆಗೆ ಅತೀತವಾದ್ದು ಆತ್ಮವಿಚಾರ. ಒಂದೇ ಮಾತು ಸಾಕು. ಬುದ್ಧಿವಂತಿಕೆ ನಡೆಯೋದಿಲ್ಲ. ಇದು ಮನಸ್ಸು ಬುದ್ಧಿಗೆ ಆಚೆಗಿನದು. ಅದರ ಇರುವಿಕೆಯಿಂದ ಇದೆಲ್ಲವು ಹುಟ್ಟಿಕೊಂಡಿತು. ಅಂ. ಈ ಹುಟ್ಟಿಕೊಂಡದ್ದು ಇಲ್ಲದೇ ಆಕ್ತದೆ. ಒಂದು ದಿವ್ಸ ಮುಗೀತಲ್ಲ. ಇವನ ಆಟ ಮುಗೀತು. ಹ. ಹ. ಹ. ಇದು ಪ್ರತಿಯೊಬ್ಬರಿಗೂ ಒಂದಲ್ಲಾ ಒಂದು ಜನ್ಮದಲ್ಲಿ ಆಗ್ಲಿಕ್ಕೆ ಸಾಧ್ಯತೆ ಉಂಟು. ಅದಕ್ಕೆ ಈಗ್ಲೇ ನಾವು ತಯಾರು ಮಾಡಿಕೊಂಡ್ರೆ ಸುಲಭ. ಹಿಂದೆ ಮಾಡಿದ್ದವರಿಗೆ ಈಗ ಸುಲಭ. ಈಗ ಮಾಡಿದವರಿಗೆ ಮುಂದೆ ಸುಲಭ. ಹೀಗೆಲ್ಲ ಉಂಟು.

ಮನಸ್ಸು ಅಂದ್ರೆ ಆಲೋಚನೆಗಳ ಸಮೂಹ. ಒಂದು ದಿವ್ಸ, ಎರಡು ದಿವ್ಸ ಜ್ವರ ಬಂದಾಗ ಆಲೋಚನೆಗಳೇನಾಯ್ತು. ಇವ ಕಂಗಾಲು. ಅಂತರಿಂದ್ರಿಯಕ್ಕೆ ಸಂಬಂಧಪಟ್ಟದ್ದು ವಿಚಾರಗಳು. ಒಂದು ರೇಡಿಯೋದಲ್ಲಿ ಮಾತು ಬರ್ತದಲ್ಲ ಹಾಗೆ. ಇಲ್ಲಿ ಅದರೊಳಗೆ ಜನ ಉಂಟಾ. ಹ. ಹ. ಹ. ಎಲ್ಲಿಯೋ ಯಾರೋ ಒಬ್ಬ ಮಾತಾಡ್ತಾನೆ. ಇಲ್ಲಿ ಅದು ಇಲ್ಲಿ ಈ ರೇಡಿಯೋದಲ್ಲಿ ಕೇಳ್ತದೆ ಅಲ್ವಾ. ರೇಡಿಯೋಗಾದ್ರು ಬೆಲೆ ಉಂಟು. ಇದಕ್ಕೆ ಬೆಲೆ ಎಷ್ಟುಂಟು. ಬೆಲೆ ಉಂಟಾ? ಅ್ಞಂ. ನಯಾಪೈಸ ಬೆಲೆ ಇಲ್ಲ. ಈ ದೇಹಕ್ಕೆ ಆಧಾರವಾಗಿ ಒಂದು ಉಂಟು. ಅದಕ್ಕೆ ಮಾತ್ರ ಬೆಲೆ. ಅದಕ್ಕೆ ಬೆಲೆ ಕೊಡುವವ ಇಲ್ಲ. ಹಾಗಾದ್ರೆ ಅದಕ್ಕೆ ಎಷ್ಟು ಬೆಲೆ. ಬೆಲೆ ಕಟ್ಟುವವನೇ ಇಲ್ಲ. ಅದು ಇದೆ. ಇಡೀ ಪ್ರಪಂಚದಲ್ಲಿ ಇರುವಂಥಾದ್ದು ಅದು ಒಂದೆ. ಅದನ್ನ ದೇಹದಲ್ಲಿ ದೇಹ 'ಜೀವಂತವಾಗಿರುವಾಗ' ಕಂಡುಕೊಳ್ಳುವಂಥಾದ್ದು. ಅಷ್ಟೆ. ಜೀವಾತ್ಮನು ಕರ್ಮ ಮತ್ತು ಜ್ಞಾನದಿಂದ ತನ್ನ ಅಸ್ತಿತ್ವವನ್ನು ಕಳಕೊಳ್ಳುವಂಥಾದ್ದು. ಕೂಡಿಹಾಕುವುದು ವ್ಯವಹಾರದಲ್ಲಿ. ಯಾವುದನ್ನೆಲ್ಲ ಅ್ಞಂ. ಆಸ್ತಿ, ಬದುಕು, ಹಣ, ಸಂಸಾರ ಇದನ್ನೆಲ್ಲ ಕೂಡಿಹಾಕುವಂಥಾದ್ದು ಒಂದು ವಿಧಾನ ಅದು ಜಗತ್ತು. ಇದು ಕಳಕೊಳ್ಳುವಂಥಾದ್ದು. ಅದನ್ನೆಲ್ಲ ಅಂದ್ರೆ ಹಣ, ಸಂಸಾರ ಇದನ್ನೆಲ್ಲ ಕಳಕೊಳ್ಳಿಕ್ಕೆ ಇವಂದೊ ಅದು. ಇವನ ಅಸ್ತಿತ್ವವನ್ನು ಕಳಕೊಳ್ಳುವಂಥಾದ್ದು. ಹಣ, ಆಸ್ತಿ, ಬದುಕು ಇದಕ್ಕೂ ಇವನಿಗೂ ಸಂಬಂಧವೇ ಇಲ್ಲ. ಇವನದ್ದಾಗಿದ್ರೆ ಅಲ್ವಾ ಕಳಕೊಳ್ಳುವಂಥಾದ್ದು. ಇವನದ್ದಾಗೆ ಒಂದು ಉಂಟು. 'ಅಹಂ'. ಅದನ್ನ ಕಳಕೊಳ್ಳುವಂಥಾದ್ದು. ಆಗ ಅವ ನಿರ್ಲಿಪ್ತನಾಗಿಬಿಡ್ತಾನೆ. ಅವನಿಂದ ಯಾವ ಮಾತುಗಳು ಬರ್ತದೆ; ಯಾವುದು ಬರ್ತದೆ ಅದೆಲ್ಲ ಇನ್ನೊಬ್ಬರ ಸ್ವತ್ತು. ಹೀಗೆಲ್ಲ ಉಂಟು.

ಹೊರಗೆ ಪ್ರಪಂಚ ಒಳಗೆ ಪರಮಾತ್ಮ. ಪ್ರಪಂಚಕ್ಕಾಗಿ ಪರಮಾತ್ಮ. ಅವನಿಗಾಗಿ ಅವ ಪರಮಾತ್ಮನಲ್ಲ. ಒಬ್ಬ ಇದ್ದಾನೆ. ಅವ ತಂದೆ. ಅವನ ಮಗನಿಗೆ ಅವ ತಂದೆ. ಅವನಿಗೆ ಅವ ತಂದೆಯು. ಅ್ಞಂ. ಹಾಗೆ ಜೀವಾತ್ಮನಿಗಾಗಿ, ಪ್ರಪಂಚಕ್ಕಾಗಿ ಅವ ಪರಮಾತ್ಮ. ಅವನಿಗಾಗಿ ಅವ ಪರಮಾತ್ಮನಲ್ಲ. ಇದೆಲ್ಲ ಯಾರೂ ಹೇಳೋದಿಲ್ಲ. ಯಾವ ಭಾಷಣಕಾರರೂ ಹೇಳೋದಿಲ್ಲ. ಅದೇ ನಮಗೆ ಆಶ್ಚರ್ಯ ಈಗ. ಅಂ. ಪರಮಾತ್ಮನು ಮಧ್ಯವರ್ತಿ. ಅಂತಿಮ ಸ್ಥಿತಿಯಲ್ಲ. ಅದು ಪುರುಷ ಪ್ರಕೃತಿ ಸಂಯೋಗದ ಒಂದು ಸ್ಥಿತಿಯೇ ಪರಮಾತ್ಮ. ಅಲ್ಲಿ ಪ್ರಕೃತಿಯ ಆವರಣ ಉಂಟು. ಆ ಆವರಣವನ್ನು ತೆಗೆದಾಗ ಅದು ಅದುವೇ ಆಯಿತು ಮತ್ತೆ. ಆತ್ಮನು ಈ ಆವರಣದಿಂದಾಗಿ ಪರಮಾತ್ಮ ಅನ್ನಿಸಿಕೊಳ್ಳುತ್ತಾನೆ. ಆವರಣವು ಹೋದಾಗ, ಅದು ಅದುವೇ ಮುಗೀತು. ಯಾವುದೂ ಇಲ್ಲ. ಅಲ್ಲಿ ಒಂದೇ ಇರೋದು ಅಂತ ಹೇಳ್ಳಿಕ್ಕೂ ಕೂಡ ಸಾಧ್ಯವಿಲ್ಲ. ದ್ವೈತ, ಅಂದ್ರೆ ಎರಡು. ಅದ್ವೈತ, ಅಂದ್ರೆ ಎರಡಿಲ್ಲ ಅಂತ ಹೇಳಿದೆ. ಒಂದು ಅಂತ ಹೇಳ್ಳಿಲ್ಲ ಅಲ್ಲಿ. ಎರಡಿಲ್ಲ ಅಂತ ಹೇಳಿದ್ರೆ. ಹಾಗಾದೆ ಒಂದು ಅಂತ ಹೇಳಿದಾಗಾಯ್ತು. ಅಂ. ಇಲ್ಲ. ದೊಡ್ಡ

ವಿಮರ್ಷೆ ಇದೀಗ. ಹೊರಗಿನ ಆವರಣಗಳನ್ನೆಲ್ಲ ಕಳಚಿಕೊಳ್ಳುವಂಥಾದ್ದೆ ಜನ್ಮದ ಮಹತ್ವ. ಆಯ್ತು. ಜನ್ಮಕ್ಕೆ ಬಂದಿದ್ದೇನೆ ಅಂತ್ಹೇಳಿ ಪ್ರತಿಯೊಬ್ಬರಿಗೂ ಗೊತ್ತುಂಟು. ಯಾಕೆ ಬಂದದ್ದು. ಅದು ಇದೂ ಎಲ್ಲ ವಿಮರ್ಶೆಗೆ ಹೋಗುವಾಗ ಇದೆಲ್ಲ ಬೇಕಾಕ್ತದೆ ವಿಮರ್ಶೆಗೆ. ಇದೆಲ್ಲ ಒಳಗೇ ಆಗುವ ಕೆಲಸಗಳು. ಇದೆಲ್ಲ ಯಾವುದೋ ಒಂದು ಅವ್ಯಕ್ತ ಶಕ್ತಿಯ ಆಟ. ಒಂದು ದೇಹ ಉಂಟಾಗುವಂಥಾದ್ದು. ಅದ್ರೊಳಗೆ ಒಂದು ಶಕ್ತಿ ಬರ್ತದೆ. ಛೆ. ಛೆ. ಇದೆಲ್ಲ ಮನುಷ್ಯ ನಿರ್ಮಿತವಾದ್ದ? ಅಂ. ಮನುಷ್ಯ ನಿರ್ಮಿತವಾದ್ದೆಲ್ಲ ಇದು ಈಗ ಬಾಡಿ (ದೇಹ) ಜಡ ಆಯ್ತು. ಜೀವ ಹೋಯ್ತು. ಅದನ್ನ ಪುನಃ ಮೊದ್ಲಿನ ಹಾಗೆ ಮಾಡ್ಲಿಕ್ಕೆ ಅವನಿಗೆ ಆಗೋದಿಲ್ಲ. ಹಾಗಾದ್ರೆ ಮನುಷ್ಯ ನಿರ್ಮಿತವಾದ್ದಲ್ಲ ಇದು. ಯಾವುದೋ ಒಂದು ಅವ್ಯಕ್ತ ಶಕ್ತಿಯದ್ದು. ಈ ದೇಹದಲ್ಲಿ 'ನಾನು', 'ನಾನು' ಅಂತ ಹೇಳುವಂಥಾದ್ದು ಈ ದೇಹದಲ್ಲಿದ್ದಿಕೊಂಡು. ಅವನು ತಾನು ಯಾರು? ಅಂತ್ಹೇಳಿ ಶೋಧನೆಗಿಳಿದಾಗ, ನೋಡಿ ಅಲ್ಲಿ ಉಂಟು. ಈ 'ನಾನು'ವಿಗೆ ಅದು ಸಾಧ್ಯ ಇಲ್ಲ. ಆ ಮೂಲ ನಾನುವೇ ತನ್ನ ಅಸ್ತಿತ್ವವನ್ನು ಕಳಕೊಂಡಾಗ ಆಯ್ತು ಕೆಲಸ. ಹ. ಹ. ಹ.

ಒಬ್ಬರು – ಒಂದು ಜಪವನ್ನ ನಾನು ಯಾವಾಗ್ಲೂ ಮಾಡ್ತೇನೆ. ಜೊತೆಗೆ ಇನ್ನೊಂದು ಜಪವನ್ನೂ ಮಾಡಬಹುದ ಬೇರೆ ಟೈಮಲ್ಲಿ. ಅಥವಾ ಒಂದೇ ಮಾಡ್ತಾ ಇದ್ರೆ ಒಳ್ಳೆದ.

ಅಜ್ಜ – ಅದು ಹ್ಯಾಗೆ ಬೇಕೋ ಹಾಗೆ ಮಾಡ್ಬಹುದು. ಅದು ಮನಸ್ಸಿನ ಒಂದು, ಏನು ನಮಗೆ ಶಬ್ದಗಳು ಸಿಕ್ಕೋದಿಲ್ಲ. ಏನ್ಹೇಳ್ತಾರೆ ಅದನ್ನ, ಅದು ಒಂದು ಮನಸ್ಸಿನ ಶುದ್ಧಿಗಾಗಿ ಅಂತ ಹೇಳ್ಬಹುದು. ಅಂತು ಅದು ಒಳ್ಳೇದು ಎಂಬುದು ಖಂಡಿತ. ಅದ್ರಿಂದ ಮನಸ್ಸು ಸ್ವಲ್ಪ ಶುದ್ಧ ಆಗ್ಬೋದು ಅಷ್ಟೆ. ಅದೊಂದೆ ಮಾಡ್ತಾ ಹೋದ್ರೆ ಮುಗೀತು. ಒಂದನ್ನು ಬಿಟ್ಟು ಮತ್ತೊಂದನ್ನು ಮಾಡೋದು ಅಂತ್ಹೇಳಿದ್ರೆ, ಅದೂ ಽ ಽ ಽ, ಇದ್ರಲ್ಲೇನೋ ಕಂಡಿತು ನಿಮ್ಗೆ ಅಲ್ವಾ. ಅದೊಂದೆ ಮಾಡಿದ್ರೆ ಸಾಕು ನಿರಂತರವಾಗಿ. ಆ ಜಪದ ಒಟ್ಟಿಗೆ ಧ್ಯಾನವು ಇದ್ರೆ, 'ಪ್ರಾಮುಖ್ಯವಾದ್ದು ಧ್ಯಾನ' ಒಳ್ಳೆದು. ಆ ಜಪ ಮಾಡುವಾಗ ಏನಾದ್ರು ಒಂದು ರೂಪವೋ, ಏನೋ ಉಂಟ ಅಲ್ಲಿ.

ಒಬ್ಬರು – ಗಾಯತ್ರೀ ಜಪ ಮಾಡೋದು. ಅದ್ರಲ್ಲಿ ಶಬ್ದ ಉಂಟು.

ಅಜ್ಜ – ನಮ್ಮ ಮನಸ್ಸನ್ನು ಅಲ್ಲೇ ನಿಲ್ಲಿಸಬೇಕು ಒಟ್ಟಾರೆ. ಈ ಮನಸ್ಸನ್ನ ನಿಲ್ಲಿಸ್ಲಿಕ್ಕೆ ಈ ಜಪ, ಅದೂ, ಇದೂ ಎಲ್ಲ ಒಂದು ಸಾಧನ ಅಷ್ಟೇ. ಮನಸ್ಸನ್ನ ನಿಲ್ಲಿಸ್ಲಿಕ್ಕೆ ಒಂದು ಸಾಧನೆ. ಈಗ ಮೂರ್ತಿಪೂಜೆ ಅಂತ ಹೇಳ್ತಾರೆ. ಯಾಕೆ ಮನಸ್ಸನ್ನ ಅಲ್ಲಿ ನಿಲ್ಲಿಸ್ಲಿಕ್ಕೆ ಅಷ್ಟೆ. ಮನಸ್ಸನ್ನ ನಿಲ್ಲಿಸಿದ್ರೆ ಮತ್ತೆ ಅಲ್ಲಿ ಮೂರ್ತಿಪೂಜೆಗೆ ಮಹತ್ವವಿಲ್ಲ. ಅಷ್ಟರವರೆಗೆ ಉಂಟು. ಮೂರ್ತಿಯಲ್ಲಿ ದೇವರನ್ನು ಕಾಣಲಿಕ್ಕಾಗಿ ಮೂರ್ತಿ ಬೇಕು. ದೇಹವೇ ತಾನಲ್ಲ. ದೇಹವು ತಾನಲ್ಲ ಎಂಬುದನ್ನು ಕಂಡುಕೊಳ್ಳಲಿಕ್ಕಾಗಿ ದೇಹವು ಬೇಕು. ಅರ್ಥಾಗ್ಲಿಲ್ವ. ಆ್ಞಂ. ಒಂದು ದೇಹವೇ ನಾನು, ಇನ್ನೊಂದು ದೇಹದಲ್ಲಿರುವವ ನಾನು ಅಂತ್ಹೇಳಿ ಬರ್ತದೆ. ಅದೂ ನಿಲ್ಲೋದಿಲ್ಲ. ಹೀಗೆ ಒಂದೊಂದೇ ಬರ್ತದೆ.

ಇಷ್ಟೆಲ್ಲ ಯಾಕೆ ಅಂತ್ಹೇಳಿ, ಯಾರಿಗೆ ಅಂತ್ಹೇಳಿ ಅಲ್ವಾ. ನಮ್ಮ ನಮ್ಮ ವಹಿವಾಟುಗಳನ್ನೆಲ್ಲ ಬಿಟ್ಟು ಇದು ಯಾಕೆ ಅಂತ್ಹೇಳಿ ಉಂಟು ಕೆಲವರಿಗೆ ಅಲ್ವಾ. ಇದೆಲ್ಲ ಸೋಮಾರಿಗಳಿಗೆ, ಕೆಲಸ ಇಲ್ಲದವರಿಗೆ ಇದು ಅಂತ್ಹೇಳ್ತಾರೆ ಕೆಲವರು ಅಲ್ಲಾ. ಅವರಿಗೆ ಬೇರೆ ಏನೂ ಕೆಲಸ ಇಲ್ಲ. ಅದಕ್ಕೆ ಅಂತ ಹೇಳ್ತಾರೆ. ಈಗ ನಮ್ಮನ್ನು ಕೆಲವು ಜನ್ರು ಹೇಳ್ತಾರೆ, "ಅವನಿಗೆ ಪ್ರಾಯ ಆಯ್ತು. ಅವನಿಗೆ ಬೇರೆ ಏನೂ ಕೆಲಸ ಇಲ್ಲ. ಅದಕ್ಕೆ ಇದನ್ನ ಹೇಳ್ತಾನೆ" ಅಂತ್ಹೇಳಿ. ಆದ್ರೆ ಈ ದೇಹಕ್ಕೆ ೩೬ನೇ ವರ್ಷ ಇರುವಾಗ್ಲೇ ಇದು ಪ್ರಾರಂಭ ಆಯ್ತು. ಈಗ ಪ್ರಾರಂಭ ಆದದ್ದಲ್ಲ. ಆಗ್ಲಿ. ಒಂದು ಲೆಕ್ಕದಲ್ಲಿ ಸೋಮಾರಿ ಅಂತ ಹೇಳಿ. ದೋಷವಿಲ್ಲ. ಆ ಸೋಮಾರಿಗಳಿಗೆ ಇರೋದು ಈ ಕೆಲಸ ಅಂತ ಇಟ್ಟುಕೊಳ್ಳುವ. ಬಾಕಿ ಕೆಲಸದಲ್ಲಿ ಅವನಿಗೆ ಉತ್ಸಾಹ ಇಲ್ಲ. ಹಾಗಾಗಿ ಅದರಲ್ಲಿ ಅವ ಸೋಮಾರಿ ಅಂತ ಹೇಳ್ಬಹುದು ಹಾಗಾದ್ರೆ. ಹ. ಹ. ಹ. ಅವನು ಇದಕ್ಕೆ ಇಳೀಲಿಲ್ಲ ಆದ್ರಿಂದ ಅವನು ಇದರಲ್ಲಿ ಸೋಮಾರಿ. ಜನ್ಮಕ್ಕೆ ಬಂದದ್ದಕ್ಕೆ ಅವನು ತನ್ನ ಅರಿವನ್ನು ಮಾಡಿಕೊಳ್ಳುವಂಥಾದ್ದು. ತಾನು ಯಾರು? ಅಂತ್ಹೇಳಿ ತಿಳ್ಕೊಳ್ಳುವಂಥಾದ್ದು. ಅವನ ಕತೆ ಮುಗೀತು. ದೇಹದಲ್ಲಿರುವಾಗ್ಲೇ ಆಗ್ಬೇಕು. ಆದ್ರೆ ಅವನ ಕೆಲ್ಸ . . . ಅವ ಬಹಳ ಕೆಲ್ಸ ಮಾಡ್ಬೋದು. ಭಾವನಾತೀತನಾಗಿ ಅವನ ಕೆಲ್ಸವು ಉತ್ಕೃಷ್ಟವಾಗಿ ಸಂಭವಿಸಬಹುದು. ಆದ್ರೆ ಅವ್ನಿಗೆ ತಾನು ಮಾಡ್ತೇನೆ ಎಂಬ ಭಾವನೆ ಇರೋದಿಲ್ಲ. ಭಾವನಾತೀತನಾಗಿ ಮಾಡುವ ಕೆಲಸ ಅದುವೇ ಪ್ರಾಧಾನ್ಯವಾದ್ದು.

ಒಬ್ಬರು – ಭಗವದ್ಗೀತೆಯಲ್ಲಿ ಕೃಷ್ಣನನ್ನೇ ಪೂಜೆ ಮಾಡ್ಬೇಕು ಅಂತ ಹೇಳ್ತಾರಲ್ಲ.

ಅಜ್ಜ – ಅಂ, ಕೃಷ್ಣ ಹೇಳ್ತಾನಲ್ವಾ.

ಒಬ್ಬರು – ಹೌದು.

ಅಜ್ಜ – ಅದಕ್ಕೆ ನಾವೀಗ ಏನು ಹೇಳ್ಬೇಕು.

ಒಬ್ಬರು – ನನ್ನನ್ನೇ ಪೂಜೆ ಮಾಡ್ಬೇಕು ಅಂತ ಹೇಳ್ತಾನಲ್ಲಾ . .

ಅಜ್ಜ – ಅದಕ್ಕೆ.

ಒಬ್ಬರು – ಅದು ಮತ್ತೆ ಮೂರ್ತಿ ಪೂಜೆ ಆಯ್ತಲ್ಲಾ.

ಅಜ್ಜ – ಯಾರು, ಕೃಷ್ಣ ಹೇಳಿದ್ದು ಅಲ್ಲಾ.

ಒಬ್ಬರು – ಕೃಷ್ಣನನ್ನೇ ಪೂಜೆ ಮಾಡ್ಬೇಕು ಅಂದ್ರೆ ಮೂರ್ತಿ ಪೂಜೆ ಆಯ್ತಲ್ಲಾ.

ಅಜ್ಜ – ಏನಪ್ಪ. ನಮ್ಗೆ ಅರ್ಥಾಗ್ಲಿಲ್ಲ. ಯಾರಾದ್ರು ಸ್ವಲ್ಪ ಬಿಡಿಸಿ ಹೇಳಿ.

ಮತ್ತೊಬ್ಬರು – ಗೀತೆಯಲ್ಲಿ ಕೃಷ್ಣನನ್ನೇ ಪೂಜೆ ಮಾಡ್ಬೇಕು ಅಂತ ಹೇಳಿದ್ದಾರಲ್ಲಾ. ಅದು ಮೂರ್ತಿ ಪೂಜೆ ಆಗೋದಿಲ್ಲಾ ಅಂತ.

ಅಜ್ಜ – ಕೃಷ್ಣನನ್ನೇ ಪೂಜೆ ಮಾಡ್ಬೇಕು ಅಂತ ಹೇಳಿದ್ದಾನಾ ಅವ.

ಒಬ್ಬರು – ಹೌದು, ಹೌದು.

ಅಜ್ಜ – ನನ್ನನ್ನೆ ಪೂಜೆ ಮಾಡ್ಬೇಕು ಅಂತ ಹೇಳಿದ್ದಾನಲ್ಲ. ಆ 'ನನ್ನನ್ನು' ಅಂದ್ರೆ ಯಾರನ್ನು ಅಂತ್ಹೇಳಿ ನೋಡ್ಬೇಕಲ್ಲಿ. ಅವ ಹೇಳಿದ್ದು ಸರಿ. ಅಲ್ಲಿ 'ನಾನು' ಅಂದ್ರೆ 'ಯಾರು' ಅಂತ ಹೇಳಿದ್ದಾನೆ ಅವ. ಕೃಷ್ಣ ಎಂಬ ದೇಹಕ್ಕೆ ಮಹತ್ವ ಕೊಟ್ಟು ಹೇಳಿದ್ದಾನ, ಅಥವ ಒಳಗಿನದ್ದಕ್ಕೆ ಮಹತ್ವ ಕೊಟ್ಟು ಹೇಳಿದ್ದಾನ. ಆ್ಞಂ. ನನ್ನನ್ನೇ ಪೂಜೆ ಮಾಡ್ಬೇಕು ಅಂತ್ಹೇಳಿ. ಯಾರನ್ನ? ನನ್ನನ್ನೇ ಅಂದ್ರೆ ಯಾರನ್ನು? ನೋಡಿ ಅಲ್ಲಿ . . . ಅದನ್ನ ನೀವೇ ಅರ್ಥ ಮಾಡಿಕೊಳ್ಳಿ. ಅಷ್ಟು ಸಾಕು. ಅವನಿಗಾಗಿ ಅವ ಯಾರು? ಆತ್ಮವೇ ಆಗಿರುತ್ತಾನೆ. ಅದೂ ಕೂಡ ಗೀತೆಯಲ್ಲೇ ಹೇಳ್ತದಲ್ಲಪ್ಪಾ. ನೋಡಿ ಅಂಥಾ ಶ್ಲೋಕ ಯಾವ್ದು ಹೇಳಿ.

ಒಬ್ಬರು – ಬಾಯಿಗೆ ಬರಲ್ಲ ಶ್ಲೋಕ.

ಅಜ್ಜ – ಆಯ್ತು. ನೋಡಿ ವಿಚಾರಮಾಡಿ.

ಮತ್ತೊಬ್ಬರು – ಅಹಮಾತ್ಮಾ ಗುಡಾಕೇಶಃ ಅಂತ ಹೇಳಿದ್ದಾನೆ.

ಅಜ್ಜ – ನೋಡಿ ಮತ್ತೆ. ದೇಹವೇ ನಾನು ಅಂತ ಅವ ಹೇಳಿದ್ದಾನಾ? ಆ್ಞಂ. ಹೇಳಿದ್ದಾನಾ? ಇಲ್ಲ. ಹಾಗಾದ್ರೆ ಪ್ರತಿಯೊಂದು ದೇಹದಲ್ಲಿರುವವನು ನಾನು, ಅಂದ್ರೆ ಆತ್ಮ. ಆತ್ಮನಿಗೆ ಸಂಕೇತವಿಲ್ಲ. ಪರಮಾತ್ಮನಿಗಾದ್ರೂ, ಸಂಕೇತ ಉಂಟು. ನೋಡಿ ಬಹಳ ಒಂದು ಸೀರಿಯಸ್ಸುಂಟು. ಅಲ್ಲಿ ಮೌನವೇ ಪ್ರಾಧಾನ್ಯ. ಶಬ್ದಗಳಿಂದ ವಿವರಿಸ್ಲಿಕ್ಕೆ ಸಾಧ್ಯವೇ ಇಲ್ಲ. ಶಬ್ದವು ಎಷ್ಟಾದ್ರೂ ಅದಕ್ಕೆ ಇಂತಿಷ್ಟೇ ಲಿಮಿಟ್ ಅಂತ್ಹೇಳಿ ಉಂಟು.

ಇದು ಇರುತ್ತದೆ. ಇಲ್ಲದೇ ಆಗುತ್ತದೆ. ಆ ಉಂಟಾಗದೇ ಇರುವಂಥಾದ್ದೊಂದುಂಟು. ಅದಕ್ಕೆ ಯಾವತ್ತೂ ನಾಶವಿಲ್ಲ. ಅದರ ಇರುವಿಕೆಯಿಂದ ಇದೆಲ್ಲವು ಕಾಣಿಸಿಕೊಳ್ತದೆ. ಇದಕ್ಕೆ ನಾಶ ಉಂಟು. ಇರ್ತವೆ. ಇಲ್ಲದೆ ಆಕ್ತದೆ. ಇದೇ ಪ್ರಪಂಚ. ಅಂದ್ರೆ ಮೂಲ ಪ್ರಕೃತಿ ಕೂಡ ನಾಶವಾಗ್ಬೇಕು ಅಂತ ಹೇಳ್ತದೆ ನಾವು. ಮೂಲಪ್ರಕೃತಿಗೆ ಆಧಾರವಾಗಿದ್ದದ್ದು

ಮಾತ್ರ ಯಾವಾಗ್ಲೂ ಇರುವಂಥಾದ್ದು. ಮೂಲ ಪ್ರಕೃತಿಗೆ ಪ್ರಪಂಚದಲ್ಲಿ ಏನಂತ ಹೇಳ್ತಾರೆ . . . ಆ್ಹಂ. ಬೇಡ ಈಗ ಬೇಡ. ಮುಂದೆ ನೋಡುವ.

ಪ್ರಕೃತಿಯಿಂದಾದದ್ದು ಈ ದೇಹ. ಇನ್ನೊಂದು ಮೂಲಪ್ರಕೃತಿ ಉಂಟು. ಆ ಮೂಲಪ್ರಕೃತಿಯಿಂದ ಆಚೆಗೆ ಸತ್ಯ. ಅಲ್ಲಿ ಉಂಟು. ಅದು ಪೂಜೆ ಗೀಜೆ ಯಾವ್ದಕ್ಕೂ ಅದು ಸಿಕ್ಕೋದಿಲ್ಲ. ಅಂದ್ರೆ ಅಲ್ಲಿ ಪೂಜೆ ಮಾಡುವವನು ಇದ್ರೆ ಅಲ್ವಾ ಅಲ್ಲಿ ಸಿಕ್ಕೋದು. ಪೂಜೆ ಮಾಡುವವನ ಅಸ್ತಿತ್ವ ಹೋದಾಗ ಮಾತ್ರ ಸತ್ಯ ದರ್ಶನ. ನೋಡಿ ಅಲ್ಲಿ ಮಾತ್ರ. ಅಷ್ಟರವಗೆಗೆ ಇದೆಲ್ಲ ಉಂಟು. ಇಲ್ಲಿ ಜಪಕ್ಕೆ ಮಹತ್ವ ಉಂಟು. ಆದ್ರೆ ಅಲ್ಲಿ ಆತ್ಮನ ವಿಚಾರಕ್ಕೆ ಹೋದಾಗ ಜಪ, ಪೂಜೆ ಇದಾವುದಕ್ಕೂ ಮಹತ್ವವಿಲ್ಲ. ಅಲ್ಲಿ ಅದು ಮಾತ್ರ. ಜಪ, ಪೂಜೆ, ಅದು, ಇದೂ . . . ಉಹೂಂ ಅದು ಒಂದೂ ಇಲ್ಲ. ದ್ವೈತ ಸಿದ್ಧಾಂತದಲ್ಲಿ ಪೂಜೆ ಉಂಟು, ಜಪ ಉಂಟು, ಮಂತ್ರ ಉಂಟೂ, ಎಲ್ಲ ಉಂಟು. ಆದ್ರೆ ಅಲ್ಲಿ ಊಹೂಂ ಯಾವುದೂ ಇಲ್ಲ. ನಿಜವಾಗಿ ವಸ್ತುಸ್ಥಿತಿ ಹಾಗೆ ಉಂಟು. ಆದ್ರೆ ಈ ಸತ್ಯವನ್ನು ಹೇಳ್ಬಾರ್ದು ಅಂತ್ಹೇಳಿ ಉಂಟು. ಹೇಳ್ಬಾರ್ದು ಸತ್ಯವನ್ನು ಅಂತ್ಹೇಳಿ ಉಂಟು. ಆದ್ರೆ ಹೇಳ್ಬೇಕು ಅಂತ್ಹೇಳಿಯೂ ಉಂಟು. ಎರಡುಂಟು. ಚಿಂತೆ ಮತ್ತು ಚಿಂತನೆ. ಚಿಂತೆಗೆ ಯಾರು ಮಹತ್ವ ಕೊಡ್ತಾರೋ ಅವರು ಚಿಂತನೆಗೆ ಹೋಗ್ಬಹುದು. ಚಿಂತೆ, ಚಿಂತೆ ಬಂತು ಅಂತ್ಹೇಳಿ ಯಾರು ಅದನ್ನು ತಳ್ಳೀ ಹಾಕ್ತಾರೋ . . . ಚಿಂತೆ ಬಂತು ಅಂತ್ಹೇಳಿ ಕೊರಗೋದು, ಅದು, ಇದೂ ಎಲ್ಲ ಉಂಟಲ್ಲ. ಹೀಗೆ ಯಾರು ಅದನ್ನು ತಳ್ಳಿ ಹಾಕ್ತಾರೋ ಅವರಿಗೆ ಚಿಂತನೆ ಸಾಧ್ಯ ಇಲ್ಲ. ಆ ಚಿಂತೆಗೆ ಮಹತ್ವವನ್ನು ಕೊಟ್ಟಾಗ ಚಿಂತನೆಯು ಅಲ್ಲಿಂದ ಪ್ರಾರಂಭವಾಕ್ತದೆ. ಹಾಗೆ ಉಂಟು. ಚಿಂತನೆಗೆ ಮಹತ್ವ ಕೊಡುವಂಥಾದ್ದು ಅಸತ್ಯಕ್ಕೆ. ಮಹತ್ವ ಕೊಡುವಂಥಾದ್ದು ಯಾಕೆ? ಅಸತ್ಯದ ಮಧ್ಯದಲ್ಲಿ ಸತ್ಯ ಇರುವ ಕಾರಣ. ಅಸತ್ಯಕ್ಕೆ ಮಹತ್ವ ಯಾಕೆ? ಈ ಅಸತ್ಯವು ಸತ್ಯವನ್ನು ಶೋಧನೆ ಮಾಡ್ತದೆ. ಈ ಇಲ್ಲವಾದ್ರೆ ಮತ್ತೇನು ಇಲ್ಲಲ್ಲ. ಅದ್ರಿಂದ ಅಸತ್ಯವು ಪ್ರಾಧಾನ್ಯವಾದ್ದು. ಅದರ ಒಳಗೆ ಸತ್ಯ ಉಂಟು. ಬಂಗಾರದ ಪಾತ್ರೆಯನ್ನು ಬಡಿಲಿಕ್ಕೆ ಯಾರಿಗೆ ಮನಸ್ಸು ಬರ್ತದೆ. ಆ್ಹಂ. ಆ ಶ್ಲೋಕ ಯಾವ್ದು, ಅದು ಯಾರಿಗೂ ಬರೋದಿಲ್ವಾ ಅದು. ಏನಪ್ಪ, ನೀನು ವೇದ ಕಲ್ತವಾ (ರಾಮಭದ್ರನನ್ನು ನೋಡಿ), ಹೇಳು ಆ ಶ್ಲೋಕ ಯಾವ್ದು. ಅಂ.

ರಾಮಭದ್ರ – ವೇದದಲ್ಲಿಲ್ಲ ಆ ಶ್ಲೋಕ.

ಅಜ್ಜ – ಆ್ಹಂ. ವೇದದಲ್ಲಿಲ್ವಾ.

ನಾಗೇಶ್ – 'ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿ ಹಿತಂ ಮುಖಂ'

ಅಜ್ಜ – ಅದ್ಯಾವುದ್ರಲ್ಲಿ ಉಂಟು.

ಶಾಂತ – ಈಶಾವಾಸ್ಯೋಪನಿಷತ್ತಿನಲ್ಲಿ.

ಅಜ್ಜ – ವೇದದಲ್ಲಿಲ್ಲಾ ಅಂತ ಹೇಳುವಾಗ ವೇದದಿಂದ ಆಚೆದ್ರಲ್ಲುಂಟು ಅಂತ್ಹೇಳಿದಾಗಾಯ್ತು. ಆ್ಹಂ. ಹಾಗೆ ಸತ್ಯವು ಅಸತ್ಯದ ಮಧ್ಯದಲ್ಲುಂಟು. ಅದ್ರಿಂದಾಗಿ ಅಸತ್ಯಕ್ಕೆ ಮಹತ್ವವನ್ನು ಕೊಡುವಂಥಾದ್ದು.

*****